ಆ) ಅವುಗಳಲ್ಲಿ ಕೆಟ್ಟು ನಿಂತಿರುವ ಬಸ್ಸುಗಳು ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ದಿನಾಂಕ: 30–1–93 ಕ್ಕೆ ಸಂಸ್ಥೆಯ ವಿಭಾಗಗಳಲ್ಲಿ ಒಟ್ಟು 9371 ವಾಹನಗಳಿದ್ದು ಅವುಗಳಲ್ಲಿ ಚಾಲನೆಯಲ್ಲಿರುವ ವಾಹನಗಳು 8661. ವಿಭಾಗವಾರು ಸಂಖ್ಯೆ ಈ ಕೆಳಕಂಡಂತಿದೆ:–

ವಿಭಾಗಗಳು	
ಬೆಂಗಳೂರು (ಕೇಂದ್ರ)	501
ಬೆಂಗಳೂರು (ಗ್ರಾಮಾಂತರ)	281
ಕೋಲಾರ	487
ಮೈಸೂರು	603
ಹಾಸನ	469
ಮಂಗಳೂರು	420
ಹುಬ್ಬಳ್ಳಿ	559
ಗದಗ	342
ದಾವಣಗೆರೆ	312
ಉತ್ತರ ಕನ್ನಡ, ಸಿರ್ಸಿ	422
ಬೆಳಗಾವಿ	750
ವಿಜಾಪುರ	417
ಬಾಗಲಕೋಟೆ	278
ಗುಲ್ಬರ್ಗ	359
ಬೀದರ್	261
ರಾಯಚೂರು	302
ಬಳ್ಳಾರಿ	363
ಬೆಂಗಳೂರು ನಗರ ಸಾರಿಗೆ (ಉತ್ತರ)	753
ಬೆಂಗಳೂರು ನಗರ ಸಾರಿಗೆ (ದಕ್ಷಿಣ)	792
ಒಟ್ಟು	8661

ಆ) ಒಟ್ಟು 710 ವಾಹನಗಳು ಚಾಲನೆಯಲ್ಲಿರುವುದಿಲ್ಲ, ಅವುಗಳು ನಿಯತಕಾಲಿಕ ಸುಧಾರಣೆ ಅರ್ಹತಾ ಪತ್ರ ನವೀಕರಣ ಹಾಗೂ ವಿವಿಧ ದುರಸ್ತಿ ಹಂತಗಳಲ್ಲಿದ್ದು ಚಾಲನೆಯಲ್ಲಿರುವುದಿಲ್ಲ.

ರಾಜ್ಯದಲ್ಲಿ ರಾಷ್ಟ್ರೀಕರಣಗೊಳಿಸಲಾದ ಮಾರ್ಗಗಳ ವಿವರ

215 (655) ಶ್ರೀ ನಾರಾಯಣರಾವ್ ಮನ್ನಳ್ಳಿ (ಬಿದರ್) ಮತ್ತು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ರಾಜ್ಯದಲ್ಲಿ ಯಾವ ಯಾವ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ. (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ರಾಷ್ಟ್ರೀಕರಣಗೊಳಿಸಿದ ಯಾವ ಯಾವ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸಲು ಅನುಮತಿ ನೀಡಲಾಗಿದೆ;

ಇ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಮಾರ್ಗಗಳಲ್ಲಿ ಖಾಸಗಿ ಬಸ್ಸು ಸಂಚಾರಕ್ಕೆ ಅನುಮತಿ ನೀಡಲಾಗಿದೆ;

ಈ) ಹಾಗಿಲ್ಲದಿದ್ದಲ್ಲಿ ಈಗ ಅನುಮತಿ ನೀಡಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

(ಕ.ರಾ.ರ.ಸಾ.ಸಂ. ವಿಭಾಗ)

ಜಿಲ್ಲೆ	ಮಾರ್ಗಗಳ ಸಂಖ್ಯೆ
1. ಬೆಳಗಾವಿ	175
2. ಉತ್ತರ ಕನ್ನಡ	55
3. ಧಾರವಾಡ	115
4. ಬಿಜಾಪುರ	173
5. ಬಳ್ಳಾರಿ	86
6. ಗುಲ್ಬರ್ಗ	194
7. ಹಾಸನ	98
8. ರಾಯಚೂರು	174
9. ಬೀದರ್	82
10. ಶಿವಮೊಗ್ಗ	48
11. ದಕ್ಷಿಣ ಕನ್ನಡ	31
12. ಚಿತ್ರದುರ್ಗ	1
13. ಮೈಸೂರು	64
14. ಕೋಲಾರ	87
15. ಬೆಂಗಳೂರು (ಗ್ರಾ)	57
16. ಬೆಂಗಳೂರು (ನ) ಆನೇಕಲ್	14

ಆ) ಅಂತರ ರಾಜ್ಯಗಳ ಮಾರ್ಗದ ಮೇಲೆ ಸ್ಕೀಂನಲ್ಲಿ ಹೊರತುಪಡಿಸಿರುವ ಖಾಸಗೀಯವರನ್ನು ಬಿಟ್ಟು ರಾಷ್ಟ್ರೀಕರಿಸಲಾದ ಮಾರ್ಗಗಳ ಮೇಲೆ ಯಾವುದೇ ಖಾಸಗೀ ಮಾಲೀಕರ ವಾಹನಗಳು ಓಡಾಡುವಂತಿಲ್ಲ.

ಬೀದರ್ ಒಂದು ಪೂರ್ತಿಯಾಗಿ ರಾಷ್ಟ್ರೀಕರಿಸಲಾದ ಜಿಲ್ಲೆಯಾಗಿದೆ ಮತ್ತು ಯಾವುದೇ ಖಾಸಗೀಯವರ ವಾಹನ ಓಡಾಟ ನಡೆಸುವಂತಿಲ್ಲ.

ಈ) ಇಲ್ಲಾ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನಪಡಿಸಿಕೊಂಡ ವಿವರ

206 (708) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):–